**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಓಎಸ್ ನಂ. 202/2021**

ಪಿಡಬ್ಲ್ಯೂಃ 1

**ದಿನಾಂಕಃ17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆಃ**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಾದ ಶ್ರೀ ಎಂವಿಕೆ ರವರಿಂದಃ**

ನಾನು ಈ ದಿನ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಬೇಕಾಗಿ ಪ್ರಾರ್ಥನೆ.

ಸಾಕ್ಷಿಯು ಹಾಜರುಪಡಿಸಿರುವ ದಾಖಲೆಗಳು

| | |
|---|---|
| ನಿ.ಪಿ–17 | 8 ಭಾವ ಚಿತ್ರಗಳು |
| ನಿ.ಪಿ–18 | ಸಿಡಿ |

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎನ್ ಎಸ್ ಕೆ ರವರಿಂದಃ**

ಎರಡು ಆಸ್ತಿಗಳ ಮೇಲೆ ಈ ದಾವೆ ಸಲ್ಲಿಸಿದ್ದು, ಅವುಗಳ ಸರ್ವೆ ನಂಬರ್ 30 ಮತ್ತು 32. ನಮ್ಮ ಜಮೀನಿಗೋಸ್ಕರ ಈ ದಾವೆ ಹಾಕಿರುತ್ತೇನೆ. ಸರ್ವೆ ನಂಬರ್ 30 ಮತ್ತು ಸರ್ವೆ ನಂಬರ್ 18 ರ ಎರಡು ಸ್ವತ್ತುಗಳಿಗೆ ದಾವೆ ಹಾಕಿರುತ್ತೇನೆ ಎಂದರೆ ಸರಿ. ದಾವಾ ಐಟಂ 1 ಎಷ್ಟು ವಿಸ್ತೀರ್ಣ ಇದೆ ಎಂದರೆ ನೆನಪಿಲ್ಲ. ದಾವಾ ಐಟಂ 2, 24 ಅಥವಾ 25 ವಿಸ್ತೀರ್ಣ ಇದೆ. ದಾವಾ ಐಟಂ 2 ನನ್ನ ದೊಡ್ಡಪ್ಪ ತಲಾರಿ ಮುನಿವೆಂಕಟಪ್ಪ ರವರ ಹೆಸರಿನಲ್ಲಿದೆ. ದಾವಾ ಐಟಂ 2 ಖಾತೆ ನನ್ನ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಗೊತ್ತಿಲ್ಲ. ದಾವಾ ಐಟಂ 1ರ ಖಾತೆ ಗೋವಿಂದಪ್ಪ, ನಾರಾಯಣಸ್ವಾಮಿ, ಕೃಷ್ಣಪ್ಪ, ಸುಬ್ರಮಣಿ, ವೆಂಕಟರಾಮಪ್ಪ ಮತ್ತು ಮಣಿ ರವರ ಹೆಸರಿನಲ್ಲಿ ಇದೆ.

ದಾವಾ ಐಟಂ 1 ರಲ್ಲಿ ಪ್ರತಿವಾದಿ ಹೆಸರಿನಲ್ಲಿ 3 ಎಕರೆ ಖಾತೆ ಇದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹೆಸರಿನ ವ್ಯಕ್ತಿಗಳು ದೊಡ್ಡಪ್ಪ , ಚಿಕ್ಕಪ್ಪನ ಮಕ್ಕಳು ಎಂದರೆ ಸರಿ.

ನನ್ನ ತಾತ ಗೋವಿಂದಪ್ಪರವರಿಗೆ 3 ಜನ ಮಕ್ಕಳು, ಅವರ ಹೆಸರು ತಲಾರಿ ಮುನಿವೆಂಕಟಪ್ಪ, ವೆಂಕಟರಾಮಪ್ಪ, ಕಾವಲಿ ರಾಮಪ್ಪ. ತಲಾರಿ ಮುನಿವೆಂಕಟಪ್ಪರವರಿಗೆ ಮದುವೆ ಆಗಿಲ್ಲ. ದಾವಾ ಐಟಂ 1 ತಲಾರಿ ಮುನಿವೆಂಕಟಪ್ಪರವರಿಗೆ ಇನಾಮತಿಯಲ್ಲಿ ಮಂಜೂರಾಗಿದೆ ಎಂದರೆ ಸರಿ. ತಲಾರಿ ಮುನಿವೆಂಕಪ್ಪ ಮತ್ತು ಅವರ ಇಬ್ಬರು ಸಹೋದರರು ದಿಃ 07.07.1998 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳು ತಲಾರಿ ಮುನಿವೆಂಕಟಪ್ಪ ರವರ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಮಾತನಾಡಿಕೊಂಡು ಒಟ್ಟು 3 ದಾವೆ ಹಾಕಿರುತ್ತೇವೆ ಎಂದರೆ ಸರಿ.

ಒಸ್ ನಂಬರ್.87/2021 ರಂತೆ ವಿಭಾಗವನ್ನು ಕೋರಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನಾನು ದಾವೆ ಹೂಡಿದ್ದು, ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ಓಎಸ್ 203/2021 ರ ದಾವೆಯನ್ನು ನನ್ನ ತಮ್ಮ ವೆಂಕಟರಾಮಪ್ಪ ರವರ ಮೇಲೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ವಜಾ ಆಗಿದೆ ಎಂದರೆ ಸರಿ. ಪ್ರತಿವಾದಿ ಮತ್ತು ಒಬ್ಬ ಮಗ ತಲಾರಿ ಮುನಿಕಟಪ್ಪ ರವರ ಮಕ್ಕಳು ಎಂದರೆ ಸರಿಯಲ್ಲ. ತಲಾರಿ ಮುನಿವೆಂಕಟಪ್ಪರವರ ಭಾಗಕ್ಕೆ ಬಂದ ಸ್ವತ್ತುಗಳನ್ನು ಪ್ರತಿವಾದಿ ಮತ್ತು ಬೇರೆ ಇಬ್ಬರಿಗೆ ವೀಲು ನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ದಿಃ 20.02.2015 ರಂದು ದಾವಾ ಐಟಂ 1 ಪ್ರತಿವಾದಿಗೆ ವೀಲು ನಾಮೆ ಮೂಲಕ ಬಂದಿದೆ ಎಂದರೆ ಸರಿಯಲ್ಲ. ತಲಾರಿ ಮುನಿವೆಂಕಟಪ್ಪರವರ ಮರಣದ ನಂತರ ಪ್ರತಿವಾದಿ ಪಿ ಅಂಡ್ ಎಸ್ ಸಿ 03/2017 ರಂತೆ ಕೇಸು ದಾಖಲಿಸಿ ಪ್ರೊಬೇಟ್ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಪ್ರೊಬೇಟ್ ನ ಆಧಾರದ ಮೇಲೆ ದಾವಾ ಐಂ 1 ರಲ್ಲಿ 33 ಗುಂಟೆ ಹೊರತುಪಡಿಸಿ 3 ಎಕರೆ ಖಾತೆ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/-

(ಶ್ರೀಮತಿ ರೋಹಿಣಿ. ಡಿ)

1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು